## ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಚನ್ನರಾಯಪಟ್ಟಣ

ಕರ್ನಾಟಕ ಸರ್ಕಾರ

ಹೇಳಿಕೆ ಹಾಳೆ (ಆರ್.ಪಿ.ಸಂಖ್ಯೆ 57)

ನಮೂನೆ ಸಂಖ್ಯೆ 4(ಸಿವಿಲ್)

**ಸಿ ಸಿ ನಂ. 19/2024**

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. ದಿಃ 17.09.2025**

**ಪಾಟಿ ಸವಾಲು ದಿಃ ಆರೋಪಿ ಪರ ವಕೀಲರಿಂದ**

ನಾನು ಪಿಯುಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಕೃಷಿ ಕೆಲಸ ಮಾಡುತ್ತಿದ್ದೇನೆ. ನನಗೆ ಇಬ್ಬರು ಮಕ್ಕಳು . ಗಂಡು ಮಗ ಡಿಪ್ಲೊಮ ಮತ್ತೊಬ್ಬ ಡಿಗ್ರಿ ಸರ್ಕಾರಿ ಕಾಲೇಜಿನಲ್ಲಿ ಓದುತ್ತಿದ್ದಾರೆ. ನನಗೆ 2 ಎಕರೆ ಜಮೀನಿದೆ. ನನಗೆ ಜಮೀನಿನ ಸರ್ವೆ ನಂಬರ್ ಹೇಳಲು ಸಾಧ್ಯ . ನನಗೆ 2 ಎಕರೆ ಸ್ವಯಾರ್ಜಿತ ಸ್ವತ್ತಾಗಿದ್ದು , ಪಿತ್ರಾರ್ಜಿತ ಸ್ವತ್ತುಗಳು ಇರುತ್ತೆ ಆದರೆ ಅದು ವಿಭಾಗ ಆಗಿರುವುದಿಲ್ಲ. ನಾವು ಎರಡು ಜನ ಮಕ್ಕಳು ಒಟ್ಟು ಕುಟುಂಬದಲ್ಲಿ ಇರುತ್ತೇವೆ. ವಾರ್ಷಿಕವಾಗಿ 80 ಸಾವಿರ ಆದಾಯ ಬರುತ್ತದೆ. ನಾನು ಬಿಪಿಎಲ್ ಕಾರ್ಡ್ ಹೊಂದಿರುತ್ತೇನೆ. ಆದಾಯ ತೆರಿಗೆಯನ್ನು ಪಾವತಿ ಮಾಡುವುದಿಲ್ಲ. ಆರೋಪಿ 10–15 ವರ್ಷಗಳಿಂದ ಪರಿಚಯ. ಆರೋಪಿಗೂ ನನಗೂ ಈ ಹಿಂದೆ ಯಾವುದೇ ಹಾಣಕಾಸಿನ ವ್ಯವಹಾರ ನಡೆದಿರುವುದಿಲ್ಲ. 2023 ರ ಜನವರಿ ಮೊದಲನೇ ವಾರದಲ್ಲಿ ಆರೋಪಿಯು ತನ್ನ ಅತ್ತೆಗೆ ಹೃದಯದ ಶ್ರಸ್ತ ಚಿಕಿತ್ಸೆ ಮಾಡಿಸುವ ಸಲುವಾಗಿ ಹಣವನ್ನು ಕೇಳಿರುತ್ತಾರೆ. ಆ ದಿನವೇ ಆರೋಪಿಗೆ ಹಣವನ್ನು ಕೊಟ್ಟಿರುವುದಿಲ್ಲ. 27.01.2023 ರಂದು ರೂ. 2,50,000 ಗಳನ್ನು ಕೊಟ್ಟಿರುತ್ತೇನೆ. ಆ ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಅವರಿಗೆ ನಗದು ರೂಪದಲ್ಲ ಕೊಡಲು ಕಾರಣ ಚೆಕ್ ಮೂಲಕ ಕೊಟ್ಟಿದ್ದಾದಲಿ ನಗದೀಕರಣ ಮಾಡಲು ವಿಳಂಬವಾಗುತ್ತದೆ ಎಂದು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. 500 ಮುಖ ಬೆಲೆಯ 5 ಬಂಡಲ್ ಗಳನ್ನು ಕೊಟ್ಟಿರುತ್ತೇನೆ. ಆ ಹಣವನ್ನು ಬ್ಯಾಂಕಿನಿಂದ ತಂದಿರುತ್ತೇನೆ. ದಿಃ 20.12.2022 ರಂದು ಬ್ಯಾಂಕಿನಿಂದ ಡ್ರಾ ಮಾಡಿರುತ್ತೇನೆ. ರೂ 2,50,000 ಗಳನ್ನು ಡ್ರಾ ಮಾಡಿರುತ್ತೇನೆ. ನಾನು ಈ ವಿಚಾರವನ್ನು ತಿಳುವಳಿಕೆ ಪತ್ರದಲ್ಲಾಗಲಿ ದೂರಿನಲ್ಲಾಗಲಿ ಪ್ರಮಾಣಪತ್ರದಲ್ಲಾಗಲಿ ನಮೂದು ಮಾಡಿರುವುದಿಲ್ಲ. ಆ ಬ್ಯಾಂಕ್ ಸ್ಟೇಟ್ ಮಂಟನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ. ನನಗೆ ಭದ್ರೇಗೌಡರವರು ಬಹಳಷ್ಟು ವರ್ಷಗಳಿಂದ ಪರಿಚಯ. ಭದ್ರೇಗೌಡರು ಆರೋಪಿಯ ಪತ್ನಿ ನನ್ನ ಮತ್ತು ಭದ್ರೇಗೌಡರ ನಡುವೆ ಯಾವುದೇ

ಹಣಕಾಸಿನ ವ್ಯವಹಾರ ನಡೆದಿಲ್ಲ. ಆದರೆ ಆತನ ಪತ್ನಿಯೊಂದಿಗೆ ಈ ಕೇಸಿನ ಸಲುವಾಗಿ ವ್ಯವಹಾರ ನಡೆದಿದೆ. ಭದ್ರೇಗೌಡ ಮತ್ತು ಅವರ ತಂದೆ ತಾಯಿಯವರ ವಿರುದ್ಧ ನಾನು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿ . ಅವರು ಕ್ರಯಪತ್ರ ಮಾಡಿಕೊಡದೇ ಇದ್ದ ಕಾರಣ ಕೇಸನ್ನು ಹಾಕಿರುತ್ತೇನೆ. ಕರಾರು ಯಾವತ್ತು ಆಗಿರುತ್ತದೆ ಎಂದರೆ ನನಗೆ ದಿನಾಂಕ ಮರೆತು ಹೋಗಿರುತ್ತದೆ. ನಾನು ಕಬಿನಿಗೌಡ , ಶಿವರಾಜು , ರವಿಕುಮಾರ ಅವರ ವಿರುದ್ಧ ಅಸಲು ದಾವಾ ನಂ. 890/2023 ರಡಿಯಲ್ಲಿ ಕೇಸನ್ನು ಹಾಕಿರುತ್ತೇನೆ ಎಂದರೆ ಸರಿ . ಅವರ ಸಹ ಕ್ರಯಪತ್ರವನ್ನು ಮಾಡಿಕೊಟ್ಟಿರುವುದಿಲ್ಲ. ಇದೇ ರೀತಿ ಚನ್ನರಾಯಪಟ್ಟಣ ನ್ಯಾಯಾಲಯದಲ್ಲಿ 10-15 ಜನರ ವಿರುದ್ಧ ಅಸಲು ದಾವೆಯನ್ನು ಹಾಗೂ ಚೆಕ್ ಬೌನ್ಸ್ ಕೇಸನ್ನು ಹಾಕಿರುತ್ತೇನೆ ಎಂದರೆ ಸರಿ. ನಾನು ಹಣಕಾಸಿನ ಲೇವಾಧೇವಿ ಕೆಲಸ ಮಾಡುವುದಿಲ್ಲ. ಆರೋಪಿಯ ಪತಿಯ ಹಾಗೂ ನನ್ನ ನಡುವೆ ಇರುವ ಹಣದ ವ್ಯವಹಾರಕ್ಕೆ ಆರೋಪಿಯು ಭದ್ರತೆಗಾಗಿ ಚೆಕ್ಕನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿ ಹಾಗೂ ಆರೋಪಿಯ ಪತ್ನಿಯ ವಿರುದ್ಧ ಎರಡು ಪ್ರಕರಣಗಳನ್ನು ಹಾಕಿದ್ದು ಆ ಕೇಸಿಗೆ ಸಂಬಂಧಪಟ್ಟಂತೆ ಭದ್ರತೆಗಾಗಿ ಚೆಕ್ಕನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಚೆಕ್ ನಲ್ಲಿರುವ ಬರವಣಿಗೆ ಮತ್ತು ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಾನು ಖಾಲಿ ಚೆಕ್ ಮೇಲೆ ಬರವಣಿಗೆ ಮಾಡಿಕೊಂಡು ಸುಳ್ಳು ಕೇಸನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಹೆಚ್ಚಿನ ಪಾಟಿ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿಯಾಗಿದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಚನ್ನರಾಯಪಟ್ಟಣ